# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ**: 2020-21 ನೇ ಸಾಲಿನ ಇಲಾಖೆಯ ಅಧಿಕಾರಿ / ನೌಕರರ ವೇತನದ ಅನುದಾನ ಬಿಡುಗಡೆ ಕುರಿತು.

**ಓದಲಾಗಿದೆ:** ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಇವರ ಪತ್ರ ಸಂಖ್ಯೆ: ಕೆಎಸ್.ಎ/17020/26/2020-ಎಡಿಎಂ-ಕೆಎಸ್.ಎ, ದಿನಾಂಕ: 08.09.2020.

*****

**ಪ್ರಸ್ತಾವನೆ:**

ಮೇಲೆ ಓದಲಾದ ಪತ್ರದಲ್ಲಿ ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಇವರು ಆರ್ಥಿಕ ಇಲಾಖೆಯ ಆದೇಶದನ್ವಯ 2020-21 ನೇ ಸಾಲಿಗೆ ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯ ಅಧಿಕಾರಿ / ನೌಕರರ ವೇತನ ಪಾವತಿಗೆ ಲೆಕ್ಕಶೀರ್ಷಿಕೆ: 2205-00-104-0-01-002 ರಡಿಯಲ್ಲಿ ರೂ.14.00 ಲಕ್ಷಗಳು, 014 ರಡಿಯಲ್ಲಿ ರೂ.4.50 ಲಕ್ಷಗಳು ಹಾಗೂ 003 ಅಡಿಯಲ್ಲಿ ರೂ.6.50 ಲಕ್ಷಗಳು ಸೇರಿದಂತೆ ಒಟ್ಟು ರೂ.25.00 ಲಕ್ಷಗಳ ಪುನರ್ವಿನಿಯೋಗದ ಮೂಲಕ ಒದಗಿಸಲು ಆರ್ಥಿಕ ಇಲಾಖೆಯು ಮಂಜೂರಾತಿ ನೀಡಿದ್ದು, ಸದರಿ ಅನುದಾನವು ಇದುವರೆಗೂ ಬಿಡುಗಡೆಯಾಗಿರುವುದಿಲ್ಲವಾದ್ದರಿಂದ, ಸೆಪ್ಟೆಂಬರ್-2020 ರ ಮಾಹೆಯ ಅಧಿಕಾರಿ / ನೌಕರರ ವೇತನ ಪಾವತಿಗೆ ಅನುದಾನದ ಕೊರತೆಯಾಗಿರುತ್ತದೆ. ಆದ್ದರಿಂದ ಸೆಪ್ಟೆಂಬರ್-2020 ರಿಂದ ನವೆಂಬರ್-2020 ರವರೆಗೆ ಕೊರತೆಯಾಗುವ ಅನುದಾನವನ್ನು ಈ ಕೆಳಕಂಡ ಲೆಕ್ಕಶೀರ್ಷಿಕೆಗಳಲ್ಲಿ ಬಿಡುಗಡೆ ಮಾಡುವಂತೆ ಸರ್ಕಾರವನ್ನು ಕೋರಿರುತ್ತಾರೆ.

(ರೂ. ಲಕ್ಷಗಳಲ್ಲಿ)

| ಕ್ರ. ಸಂ. | ಲೆಕ್ಕಶೀರ್ಷಿಕೆ 2205-00-104-0-01 | ಹಂಚಿಕೆಯಾದ ಅನುದಾನ | ಸರ್ಕಾರದಿಂದ ಬಿಡುಗಡೆಯಾದ ಅನುದಾನ | ಇದುವರೆಗೂ ವೆಚ್ಚವಾಗಿರುವ ಅನುದಾನ | ಉಳಿಕೆ ಅನುದಾನ | ಕೊರತೆ ಅನುದಾನ ನವೆಂಬರ್ 2020 |
|---|---|---|---|---|---|---|
| 1 | 002- ಅಧಿಕಾರಿಗಳ ವೇತನ | 77.00 | 41.99 | 38.89 | 3.10 | 19.45 |
| 2 | 003- ಸಿಬ್ಬಂದಿಗಳ ವೇತನ | 115.50 | 72.65 | 55.48 | 17.17 | 25.50 |
| 3 | 014- ಇತರೆ ಭತ್ಯೆ | 45.50 | 27.33 | 23.35 | 3.98 | 10.70 |
| | **ಒಟ್ಟು** | **238.00** | **171.97** | **117.72** | **24.25** | **55.65** |

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಕಸಂವಾ 14 ರಾಪಸಿ ಆಕ 2020, ಬೆಂಗಳೂರು**
**ದಿನಾಂಕ: 15.09.2020.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯ ಅಧಿಕಾರಿಗಳು ಮತ್ತು ನೌಕರರ ಸೆಪ್ಟೆಂಬರ್-2020 ರಿಂದ ನವೆಂಬರ್-2020 ರವರೆಗೆ ಕೊರತೆಯಾಗುವ ವೇತನಾನುದಾನ ರೂ.55.65ಲಕ್ಷ (ಐವತ್ತೈದು ಲಕ್ಷದ ಆರವತ್ತೈದು ಸಾವಿರ ರೂಪಾಯಿಗಳು ಮಾತ್ರ)ಗಳನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ಈ ಕೆಳಕಂಡ ಲೆಕ್ಕಶೀರ್ಷಿಕೆಗಳಡಿ ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಇವರಿಗೆ ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿ ನೀಡಿದೆ.

(ರೂ. ಲಕ್ಷಗಳಲ್ಲಿ)

| ಕ್ರ. ಸಂ. | ಲೆಕ್ಕಶೀರ್ಷಿಕೆ 2205-00-104-0-01 | ಹಂಚಿಕೆಯಾದ ಅನುದಾನ | ಸರ್ಕಾರದಿಂದ ಬಿಡುಗಡೆಯಾದ ಅನುದಾನ | ಇದುವರೆಗೂ ವೆಚ್ಚವಾಗಿರುವ ಅನುದಾನ | ಉಳಿಕೆ ಅನುದಾನ | ಸೆಪ್ಟೆಂಬರ್-2020 ರಿಂದ ನವೆಂಬರ್-2020 ರವರೆಗೆ ಬಿಡುಗಡೆ ಮಾಡಿದ ಅನುದಾನ |
|---|---|---|---|---|---|---|
| 1 | 002- ಅಧಿಕಾರಿಗಳ ವೇತನ | 77.00 | 41.99 | 38.89 | 3.10 | 19.45 |
| 2 | 003- ಸಿಬ್ಬಂದಿಗಳ ವೇತನ | 115.50 | 72.65 | 55.48 | 17.17 | 25.50 |
| 3 | 014- ಇತರೆ ಭತ್ಯೆ | 45.50 | 27.33 | 23.35 | 3.98 | 10.70 |
| | **ಒಟ್ಟು** | **238.00** | **171.97** | **117.72** | **24.25** | **55.65** |

....2

**ಷರತ್ತುಗಳು:**

1. ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 91 ವೆಚ್ಚ-7/2020, ದಿನಾಂಕ: 30.05.2020ರಂತೆ ವೇತನಕ್ಕೆ ಸಂಬಂಧಿಸಿದಂತೆ ಏಪ್ರಿಲ್, ಮೇ ತಿಂಗಳಿಗೆ ಬಿಡುಗಡೆ ಮಾಡಿರುವುದೂ ಸೇರಿದಂತೆ ಆಯವ್ಯಯದ 8/12 ಭಾಗದಷ್ಟು ಮೊತ್ತವನ್ನು ಮಾತ್ರ ಬಿಡುಗಡೆ ಮಾಡಬಹುದಾಗಿದೆ. ಇದರಲ್ಲಿ ಈಗಾಗಲೇ ಬಿಡುಗಡೆ ಮಾಡಲಾಗಿರುವ ಮೊತ್ತವನ್ನು ಹೊರತುಪಡಿಸಿ ಉಳಿದಿರುವ ಮೊತ್ತವನ್ನು ಎರಡು ಕಂತುಗಳಲ್ಲಿ ಬಿಡುಗಡೆ ಮಾಡಬಹುದಾಗಿದೆ. ಈ ಸೂಚನೆ ಹೆಚ್.ಆರ್.ಎಂ.ಎಸ್. ನಿಂದ ಹೊರಗೆ ವೇತನ ಸೆಳೆಯುವ ಸಂಸ್ಥೆಗಳಿಗೆ ಅನ್ವಯಿಸುವುದಿಲ್ಲ. ಹೆಚ್.ಆರ್.ಎಂ.ಎಸ್. ಹೊರಗೆ ವೇತನ ಸೆಳೆಯುತ್ತಿರುವ ಸಹಾಯನುದಾನ ಸಂಸ್ಥೆಗಳಿಗೆ ಆಯವ್ಯಯವನ್ನು ಪರಿಷ್ಕರಿಸಿರುವುದರಿಂದ ಪರಿಷ್ಕೃತ ಆಯವ್ಯಯದಲ್ಲಿ ನವೆಂಬರ್ ತಿಂಗಳುವರೆಗೆ ಪ್ರತಿ ತಿಂಗಳು 1/12ರಂತೆ ಬಿಡುಗಡೆ ಮಾಡುವುದು.
2. 1999ರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮವನ್ನು ಹಾಗೂ ಅದರ ನಿಯಮಗಳು 2000 ವನ್ನು ಕಡ್ಡಾಯವಾಗಿ ಪಾಲಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್ ಡಿ 02 ಟಿಎಫ್ ಪಿ 2020, ದಿನಾಂಕ: 30.05.2020 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಹೆಚ್.ಕೆ.ಸುರೇಶಬಾಬು)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
(ಆಡಳಿತ ಕನ್ನಡ).

**ಪ್ರತಿಯನ್ನು:**

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್.ಎಸ್.ಎ), (ಇ & ಆರ್.ಎಸ್.ಇ)ಕರ್ನಾಟಕ, ಹೊಸ ಕಟ್ಟಡ "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-560001.
2. ಪ್ರಧಾನ ಮಹಾಲೇಖಪಾಲರು (ಎ &ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5329, ಬೆಂಗಳೂರು-560001.
3. ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ವಿಕಾಸಸೌಧ, ಬೆಂಗಳೂರು.
4. ನಿರ್ದೇಶಕರು, ಖಜಾನೆ ಇಲಾಖೆ, ವಿ.ವಿ. ಗೋಪುರ, ಬೆಂಗಳೂರು.
5. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ -7) ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಕಾರ್ಯದರ್ಶಿಗಳ ಆಪ್ತ ಶಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಕಾಸಸೌಧ, ಬೆಂಗಳೂರು.
7. ಸರ್ಕಾರದ ಉಪಕಾರ್ಯದರ್ಶಿಯವರ ಆಪ್ತ ಶಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಕಾಸಸೌಧ, ಬೆಂಗಳೂರು.
8. ಸಮನ್ವಯ ಶಾಖೆ/ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.